# ರಿಯೋನೆನ್-ಬೌದ್ಧ ಭಿಕ್ಷುಣಿ

ಸ್ವರ್ಣಗೌರಿ

ತೀವ್ರವಾದ ಆಧ್ಯಾತ್ಮಿಕ ವ್ಯಾಕುಲತೆ ಇದ್ದರೆ ವ್ಯಕ್ತಿ ಎಂಥ ತ್ಯಾಗಕ್ಕೂ ಸಿದ್ಧನಿರುತ್ತಾನೆ ಎಂಬುದಕ್ಕೆ ಜ್ವಲಂತ ನಿದರ್ಶನವಾಗಿದೆ ಈ ಬೌದ್ಧ ಭಿಕ್ಷುಣಿಯ ಅಪೂರ್ವ ಜೀವನ. ಅದರ ಕಿರುಪರಿಚಯವನ್ನು ನೀಡಿರುವ ಕುಮಾರಿ ಸ್ವರ್ಣಗೌರಿಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.

**ಚೆ**ಲುವೇ ಮೈತಳೆದಂತಿದ್ದ ಇಪ್ಪತ್ತೈದರ ಹರಯದ ನವ ಯುವತಿ. ಹೂದೋಟದಲ್ಲಿ ಅರಳಿನಿಂತ ಸುಂದರ ಪುಷ್ಪವನ್ನು ಯಾರಾದರೂ ಹೊಸಕಿಹಾಕುವುದುಂಟು. ಆದರೆ ಆ ಹೂವು ತನ್ನನ್ನು ತಾನೇ ಹೊಸಕಿಕೊಳ್ಳುವುದುಂಟೆ? ಕೆಂಪಗೆ ಕಾದ ಕಬ್ಬಿಣದಿಂದ ತನ್ನ ಸುಂದರ ಮೊಗವನ್ನು ತನ್ನ ಕೈಗಳಿಂದಲೇ ಸುಟ್ಟು ದೈವದತ್ತವಾದ ರೂಪವನ್ನು ಕೆಡಿಸಿ ಕುರೂಪಿಯಾಗಲು ಹವಣಿಸುತ್ತಿರುವ ಜಪಾನಿನ ಸುಂದರಿಯರಲ್ಲಿ ಒಬ್ಬಳಾದ ಈ ಕವಯಿತ್ರಿಯ ಮನದಾಸೆ ಏನಿರಬಹುದು?

ಕ್ರಿ.ಶ. ೧೭೭೯ರಲ್ಲಿ ಜಪಾನಿನ ವೀರಯೋಧನೆಂದು ಸುಪ್ರಸಿದ್ಧನಾದ ಶಿಂಜನ್ನನ (Shingen) ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಮನೆಯನ್ನೂ ಮನೆಯಲ್ಲಿನ ಎಲ್ಲರ ಮನಗಳನ್ನೂ ಸಂತೋಷಸಾಗರದಲ್ಲಿ ಮುಳುಗಿಸಿದ ಕಾರಣವೇನಿರಬಹುದು? ಶಿಂಜನ್‌ರಿಗೆ ಮುದ್ದಾದ ಮೊಮ್ಮಗಳು ಜನಿಸಿದ್ದಾಳೆ! ಇದೇ ಆ ಸಂತಸದ ಸುದ್ದಿ. ಈ ಪುಟ್ಟ ಕಂದಮ್ಮ ತನ್ನ ಬರುವಿಕೆಯಿಂದ ಆನಂದದ ಹೊಳೆಯನ್ನೇ ಹರಿಸಿದಳು. ಮುಗ್ಧ, ಮನೋಹರ, ಕಿಲಕಿಲ ನಗು ಮನೆಯನ್ನೆಲ್ಲಾ ತುಂಬಿತು. ದಿನಗಳೆದಂತೆ ಈ ಪುಟ್ಟಿಯು ನೈಸರ್ಗಿಕ ಸೌಂದರ್ಯವನ್ನು ಸವಿಯುವ ಕಲೆಯನ್ನು ಮೈಗೂಡಿಸಿಕೊಳ್ಳುತ್ತಾ ಬೆಳೆಯತೊಡಗಿದಳು. ಪ್ರಕೃತಿಯು ತನ್ನ ಸೌಂದರ್ಯವನ್ನೆಲ್ಲ ಎರಕ ಹೊಯ್ದಂತೆ ಇದೆಯೇನೋ ಎಂಬಂತಹ ಸುಂದರ, ಮನೋಹರ ರೂಪ. ಪರಿಣಾಮವಾಗಿ ಹದಿನೇಳರ ವಯಸ್ಸಿಗೇ ಜಪಾನಿನ ಅತ್ಯಂತ ಚೆಲುವೆಯರಲ್ಲಿ ಒಬ್ಬಳೆನಿಸಿಕೊಂಡಳು ಹಾಗೂ ಅಂದಿನ ಕಾಲದ ಸುಪ್ರಸಿದ್ಧ ಕವಯಿತ್ರಿಗಳ ಗುಂಪನ್ನು ಸೇರಿದಳು. ಆಕೆಯ ಪ್ರತಿಭೆ, ಸೌಂದರ್ಯದ ಕೀರ್ತಿ ರಾಜನ ಆಸ್ಥಾನದವರೆಗೂ ಹಬ್ಬಿತು. ಜಪಾನಿನ ದೊರೆಯ ಆಮಂತ್ರಣದ ಮೇರೆಗೆ ಆಸ್ಥಾನದ ಕವಯಿತ್ರಿಯಾದಳು. ಇಲ್ಲಿ ಸಾಮ್ರಾಜ್ಞಿಯ ಮನವನ್ನು ತುಂಬಿದಳು. ರಾಣಿಯ ಪ್ರೀತಿಗೆ ಪಾತ್ರಳಾಗಿ ಅಚ್ಚುಮೆಚ್ಚಾದಳು. ಇಬ್ಬರ ನಡುವೆ ಪ್ರೀತಿಯ ಬಾಂಧವ್ಯ, ಸ್ನೇಹದ ಬೆಸುಗೆ ಉಂಟಾಯಿತು.

ಬೆಳಕಿನ ಮಹತ್ತ್ವವನ್ನು ತಿಳಿಸುವುದೇ ಕತ್ತಲಿನ ಗುರಿ. ಸುಖದ ಸವಿಯನ್ನುಣ್ಣಲು ದುಃಖದ ಆವಶ್ಯಕತೆ. ಆದರೆ ಕತ್ತಲು-ಬೆಳಕಿನ, ಸುಖ-ದುಃಖದ ಛಾಯೆಯಲ್ಲೇ ಸದಾ ಓಡಾಡುತ್ತಿದ್ದರೆ ಅಂತ್ಯವೆಲ್ಲಿ? ಎರಡನ್ನೂ ಮೀರಿ ನಿಂತಾಗಲೇ ಬದುಕಿನ ಚರಮೋದ್ದೇಶವನ್ನು ಪಡೆದಂತಾಗುವುದು. ಹಠಾತ್ತಾಗಿ, ಒಂದು ದಿನ ಮಹಾರಾಣಿಯು ಸಾವನ್ನಪ್ಪಿದಳು. ಭೋರ್ಗರೆಯುತ್ತಾ ಹರಿಯುತ್ತಿದ್ದ ಜಲಪಾತವು ಇದ್ದಕ್ಕಿದ್ದಂತೆ ಸ್ತಬ್ಧವಾದಂತಾಯಿತು. ದುಃಖವೇನೆಂದು ಅರಿಯದ ಕವಯಿತ್ರಿಯ ಬಾಳಿನಲ್ಲಿ ಮಬ್ಬು ಕವಿದಂತಾಯಿತು. ಜಗತ್ತಿನ ನಶ್ವರತೆಯನ್ನು ತೀವ್ರವಾಗಿ ಅನುಭವಿಸತೊಡಗಿದಳು. ಇದರಿಂದ ಅವಳಲ್ಲಿ ಅನೇಕ ಬದಲಾವಣೆಗಳಾಗತೊಡಗಿದವು. ಮನವು ಧರ್ಮಜೀವನದ ಕಡೆ ತಿರುಗಿತು. ಬೌದ್ಧಧರ್ಮವಾದ 'ಜೆನ್' ಅಧ್ಯಯನ ಮಾಡಲು ನಿರ್ಧರಿಸಿದಳು. ಸುಪ್ತವಾಗಿದ್ದ ಆಧ್ಯಾತ್ಮಿಕ ಪ್ರವೃತ್ತಿ ಜಾಗೃತವಾಯಿತು. ಆದರೆ ಮಹಾಮಾಯೆಯು ಅಷ್ಟು ಸುಲಭವಾಗಿ ಬಿಡಳು. ಶ್ರೀರಾಮಕೃಷ್ಣರೇ ಹೇಳುವಂತೆ ಜಗನ್ಮಾತೆಯು ತಾನೇ ಆನಂದದಿಂದ ಪಟಗಳೊಡನೆ ಕ್ರೀಡಿಸುತ್ತಿರುವಳು. ಈ ಸಂಸಾರವೆಂಬ ದಾರವನ್ನು ಬಿಗಿದು ಜೀವಿಗಳೆಂಬ ಪಟಗಳೊಡನೆ ಆಟವಾಡುತ್ತಿದ್ದಾಳೆ.

ಆಕೆಯ ಹೃದಯದ ಕರೆಗೆ ಮನೆಯವರಿಂದ ತೀವ್ರ ವಿರೋಧ ಪ್ರಾರಂಭವಾಯಿತು. ತ್ವರಿತವಾಗಿ ಆಕೆಗೆ ಅನುರೂಪನಾದ ವರನ ಅನ್ವೇಷಣೆಯಲ್ಲಿ ತೊಡಗಿದರು. ಮನೆಯವರೆಲ್ಲಾ ಒಂದುಗೂಡಿದಾಗ ಅಸಹಾಯಕ ಬಲಿಪಶುವಾದಳು. ಅವಳ ಮನದ ಅಳಲನ್ನು ಆಲಿಸುವವರಾರು? ಈ ಚಕ್ರವ್ಯೂಹದಿಂದ ಹೊರಬರುವ ಮಾರ್ಗವನ್ನು ತಾನೇ ಕಂಡುಕೊಂಡಳು. ಮೂರು ಮಕ್ಕಳನ್ನು ಹಡೆದನಂತರ ತಾನು ಭಿಕ್ಷುಣಿಯಾಗುವೆನೆಂಬ ಷರತ್ತಿಗೆ ಮನೆಯವರೂ, ಭಾವೀಪತಿಯೂ ಒಪ್ಪಿದ ನಂತರವೆ ವಿವಾಹಕ್ಕೆ ಸಮ್ಮತಿಯನ್ನು ನೀಡಿದಳು. ಮತ್ತೊಮ್ಮೆ ಮನೆಯಲ್ಲಿ ಆನಂದೋತ್ಸಾಹಗಳು ತುಂಬಿದವು—ಒಬ್ಬರಿಗೆ ಹೊರತಾಗಿ. ವೈಭವದಿಂದ ವಿವಾಹವು ಜರುಗಿತು. ತನ್ನೆಲ್ಲ ದಾರುಣ ವ್ಯಥೆಯನ್ನು ಮನದೊಳಗೇ ನುಂಗುತ್ತಾ ಪತಿಯೊಡನೆ ನೂತನ ಗೃಹಕ್ಕೆ ಅಡಿಯಿಟ್ಟಳು ಮ್ಲಾನವದನಳಾಗಿ.

ಕಾಲ ಉರುಳಿತು. ಸಂಸಾರವು ವೃದ್ಧಿಯಾಯಿತು. ಮೂರು ಮುದ್ದಾದ ಮಕ್ಕಳ ತಾಯಿಯಾದಳು ಇಪ್ಪತ್ತೈದರ ಹರೆಯದ ಈ ನವಯುವತಿ. ಆದರೆ ಸಂಸಾರವು ಮನದಲ್ಲಿ ಹೊಕ್ಕಲಿಲ್ಲ. ಅದೇ ವೈರಾಗ್ಯಾಗ್ನಿಯು ಇನ್ನೂ ಜ್ವಲಿಸುತ್ತಿತ್ತು. ವಿವಾಹಕ್ಕೆ ಮುನ್ನ ಎಲ್ಲರೂ ಒಪ್ಪಿದ್ದ ಆ ಷರತ್ತನ್ನು ನೆನಪಿಸಿದಳು. ಮನೆಯವರೆಲ್ಲಾ ಹೌಹಾರಿದರು. ತಬ್ಬಲಿಯಾಗುವ ಮಕ್ಕಳ ಗತಿಯೇನು? ಸಂಸಾರದ ಗತಿಯೇನು? ಆದರೆ ಈ ಬಾರಿ ಮಹಾಮಾಯೆಯ ಆಟ ಮುಂದುವರಿಯಲು ಅವಕಾಶವಿರಲಿಲ್ಲ.

ಸೋಲನ್ನೊಪ್ಪಿಕೊಳ್ಳಲೇಬೇಕು. ಪತಿಯ ಪ್ರೀತಿಯಾಗಲಿ ಮಕ್ಕಳ ವಾತ್ಸಲ್ಯವಾಗಲಿ ಮನೆಯವರ ಆಕ್ರಂದನವಾಗಲಿ ಈ ವಿರಾಗಿಣಿಯ ಮನಸ್ಸನ್ನು ವಿಚಲಿತ ಗೊಳಿಸಲಿಲ್ಲ. ಹಿಡಿದ ಹಠವನ್ನು ಬಿಡದ ಛಲವಿಕ್ರಮನಂತೆ ತಲೆಯ ಕೂದಲನ್ನು ತೆಗೆಸಿದಳು. ಬೋಳು ಮಂಡೆಯಲ್ಲಿ "ರಿಯೋನೆನ್" (Ryonen) ಅಂದರೆ, ಚೆನ್ನಾಗಿ ಅರ್ಥಮಾಡಿಕೊಳ್ಳುವುದು, ಎಂಬ ಸಂನ್ಯಾಸ ನಾಮಾಂಕಿತದಿಂದ ಮನೆಯನ್ನು ತೊರೆದು ಆ ದೈವವಾಣಿಯ ಕರೆಗೆ ಓಗೊಡುತ್ತಾ ಹೊರಟೇಬಿಟ್ಟಳು!

ಆ ದೈವಾನ್ವೇಷಣೆಗೆ ತೊಡಗುವ ಹಾದಿಯೇನು ಹೂವಿನ ಸೋಪಾನವಲ್ಲ. ಕಲ್ಲುಮುಳ್ಳುಗಳಿಂದ ಕೂಡಿದ ಕಠಿಣವಾದ ಹಾದಿಯದು. ಆದ್ದರಿಂದ ಸಹಜವಾಗಿಯೇ ದಾರಿಗುಂಟ ಪರೀಕ್ಷೆಗಳು, ಸವಾಲುಗಳು ಎದುರಾಗುತ್ತವೆ. ಆದರೆ ಸಾಮಾನ್ಯರಂತೆ ಕುಗ್ಗಿಸುವ ಬದಲು ಇವು ಆಧ್ಯಾತ್ಮಿಕ ಪಿಪಾಸುಗಳಿಗೆ ಮತ್ತಷ್ಟು ಆತ್ಮಸ್ಥೈರ್ಯವನ್ನು ನೀಡುವುವು. ಗುರುವನ್ನು ಅರಸುತ್ತಾ ಈಡೋ (Edo) ಎಂಬ ಪಟ್ಟಣಕ್ಕೆ ಬಂದಳು ಆ ಭಿಕ್ಷುಣಿ. ಅಲ್ಲಿಯ ಟೆಟ್‌ಸುಗ್ಯೂ (Tetsugyu) ಎಂಬ ಮಹಾನ್ ಗುರುವಿನ ಬಳಿ ಶಿಷ್ಯವೃತ್ತಿ ಸ್ವೀಕರಿಸಲು ಉತ್ಸುಕಳಾದಳು. ಆದರೆ ಆದದ್ದೇನು? ಸತ್ಯಕ್ಕಾಗಿ ಹಂಬಲಿಸುತ್ತಾ ತನ್ನ ಬಳಿ ಬಂದ ಆಕೆಯನ್ನು ಒಮ್ಮೆ ದೃಷ್ಟಿಸಿ ನೋಡಿದ ಗುರು ತುಂಬಾ ಸುಂದರಳಾಗಿರುವಳೆಂದು ತಿರಸ್ಕರಿಸಿಬಿಟ್ಟರು! ಧೃತಿಗೆಡದ ರಿಯೋನೆನ್ ಮತ್ತೊಬ್ಬ ಗುರುವನ್ನು ಅರಸುತ್ತಾ ಹಕುವೊ (Hakuo) ಎಂಬಾತನ ಬಳಿ ಬಂದಳು. "ನಿನ್ನ ಈ ಸೌಂದರ್ಯವು ಸಂಕಷ್ಟಗಳಲ್ಲಿ ಸಿಲುಕಿಸುತ್ತದೆ" ಎಂಬ ಕಾರಣವನ್ನು ಒಡ್ಡುತ್ತಾ ಆತನೂ ಆಕೆಯನ್ನು ತಿರಸ್ಕರಿಸಿದನು. ಮತ್ತೊಮ್ಮೆ ಅದೇ ಘಟನೆಯ ಪುನರಾವರ್ತನೆ! ಆಧ್ಯಾತ್ಮಿಕ ಗುರಿಗಾಗಿ ತನ್ನ ಮನೆಯವರನ್ನೇ ತೊರೆದು ಬಂದ ರಿಯೋನೆನ್‌ಗೆ ಅಶಾಶ್ವತವೂ ನಶ್ವರವೂ ಆದ ಈ ದೈಹಿಕ ಸೌಂದರ್ಯವು ತನ್ನ ಅನ್ವೇಷಣೆಯ ಹಾದಿಯಲ್ಲಿ ಅಡ್ಡಿಯಾಗುವುದೆ?

ಸತ್ಯವನ್ನರಿಯುವ ಹಾದಿಯಲ್ಲಿ ಬಾಧಕವನ್ನೊಡ್ಡುತ್ತಿರುವ ಈ ಸೌಂದರ್ಯವೇ ತನಗೆ ಬೇಡವೆಂದು ಕೆಂಪಗೆ ಕಾದ ಕಬ್ಬಿಣದಿಂದ ತನ್ನ ಸುಂದರ ಮೊಗವನ್ನೇ ಸುಟ್ಟುಕೊಂಡು ಬಿಟ್ಟಳು! "ಪ್ರಪಂಚದ ಸುಂದರಿ" ಅಥವಾ "ದೇಶದ ಸುಂದರಿ" ಎಂದು ಆಯ್ಕೆಯಾಗಲು ಹೆಣ್ಣುಮಕ್ಕಳೆಲ್ಲಾ ಸ್ಪರ್ಧಿಸಲು ಬಯಸುತ್ತಿರುವ ಈ ಕಾಲಕ್ಕಂತೂ ಇದು ಮೌಢ್ಯತೆಯ ಪರಮಾವಧಿ ಎನಿಸಬಹುದಲ್ಲವೇ? ಆದರೆ ಜನ್ಮತಃ ಹೆಣ್ಣಿನಲ್ಲಿ ಮೂಡಿಬರುವ ಈ ಸೌಂದರ್ಯಪ್ರಜ್ಞೆಯನ್ನೇ ಧಿಕ್ಕರಿಸಿ ಅಸಾಮಾನ್ಯಳೆನಿಸಿಕೊಂಡಳು ಈ ಭಿಕ್ಷುಣಿ.

ತನ್ನ ಬಳಿ ಎರಡನೆಯ ಬಾರಿ ಆಧ್ಯಾತ್ಮಿಕ ಭಿಕ್ಷೆಯನ್ನು ಬೇಡುತ್ತಾ ನಿಂತ ರಿಯೋನೆನ್‌ಳನ್ನು ಸಂತೋಷದಿಂದ ಶಿಷ್ಯಳನ್ನಾಗಿ ಸ್ವೀಕರಿಸಿದರು ಗುರು ಹಕುವೋ. ಶಿಷ್ಯಳ ಅತೀವ ವ್ಯಾಕುಲತೆ, ದೃಢತೆಗೆ ಮೆಚ್ಚಿದ ಗುರುವು ತಾವು ಗಳಿಸಿದ ಅಪಾರವಾದ ಆಧ್ಯಾತ್ಮಿಕ ಸಂಪತ್ತನ್ನೆಲ್ಲಾ ಧಾರೆಯೆರೆದರು. ಈ ಘಟನೆಯ ಜ್ಞಾಪಕಾರ್ಥವಾಗಿ ಅವಳ ಮನದ ಭಾವನೆಗಳು ಈ ರೀತಿ ಕೃತಿಯಲ್ಲಿ ಮೂಡಿದವು :

ಸಾಮ್ರಾಜ್ಞಿಯ ಪರಿಚಾರಿಕೆ ನಾನಾಗಿ
ಸುಂದರ ಬೆಲೆಬಾಳುವ ಎನ್ನಯ ವಸನಗಳಿಗೆ
ಸುವಾಸನೆಯನ್ನೀಯಲು ಗಂಧದಕಡ್ಡಿಯ ಹಚ್ಚಿದೆ.
ಆದರೀಗ ಮನೆಮಠಗಳಿಲ್ಲದ ಭಿಕ್ಷುಣಿಯಾಗಿ
ಆಧ್ಯಾತ್ಮಿಕ ಪ್ರಪಂಚವನ್ನು ಪ್ರವೇಶಿಸಲು
ಮುಖವನ್ನೇ ಸುಟ್ಟುಕೊಂಡೆ.

ನಲವತ್ತೊಂದು ವರ್ಷಗಳ ದೀರ್ಘಾವಧಿಯ ಸಾಧನೆಯಲ್ಲಿ ದೈವತ್ವದ ಕಂಪನ್ನು ಬೀರುತ್ತಾ ಅರವತ್ತಾರು ವರ್ಷ ವಯಸ್ಸಿನಲ್ಲಿ ಈ ದೇಹಬಂಧನದಿಂದ ಬಿಡುಗಡೆ ಹೊಂದಿದಳು. ಆಧ್ಯಾತ್ಮಿಕ ಪರಂಪರೆಯೆಂಬ ಆಕಾಶದಲ್ಲಿ ಮಿನುಗುತ್ತಿರುವ ಮೀರಾಬಾಯಿ, ಅಕ್ಕಮಹಾದೇವಿ, ಅವ್ವೆಯಾರ್, ಥೆರೆಸಾ ಎಂಬಿವೇ ನಕ್ಷತ್ರಗಳೊಡನೆ ಮತ್ತೊಂದು ನಕ್ಷತ್ರವು ಮಿನುಗ ತೊಡಗಿತು. (ಆಧಾರ : *The Prayer of the Frog*)

## ಎಲ್ಲವೂ ಸುಲಭವಲ್ಲ !

ಪ್ರಖ್ಯಾತ ಜರ್ಮನ್ ವಯೋಲಿನ್ ವಾದ್ಯಪಟು, ಮೋಜಾರ್ಟ್‌ರವರು, ಒಂದು ಸಂಜೆ ಸಂಗೀತ ಸಭೆ ನಡೆಸಿಕೊಟ್ಟರು. ಕಾರ್ಯಕ್ರಮದ ನಂತರ ಮಹಿಳೆಯೊಬ್ಬಳು ಬಂದು ಅಭಿನಂದಿಸುತ್ತಾ ಹೇಳಿದಳು: "ಮಾನ್ಯರೆ, ಸಂಗೀತ ಸಭೆ ಬಹಳ ಚೆನ್ನಾಗಿತ್ತು! ಆದರೆ ನನಗಿದರಲ್ಲಿ ವಿಶೇಷವೇನೂ ಕಾಣಿಸಲಿಲ್ಲ. ಪ್ರಯತ್ನಪಟ್ಟರೆ ನಾನೂ ಕೂಡ ಇದಕ್ಕಿಂತ ಚೆನ್ನಾಗಿ ವಯೋಲಿನ್ ನುಡಿಸಬಲ್ಲೆ ಎಂದೆನಿಸುತ್ತದೆ."

ಸ್ವಲ್ಪವೂ ಕೆರಳದೆ, ಮೋಜಾರ್ಟ್ ಶಾಂತಿಯಿಂದ ಉತ್ತರಿಸಿದರು: "ಹೌದು, ಮೇಡಮ್, ಇದರಲ್ಲಿ ವಿಶೇಷವೇನಿಲ್ಲ. ಯಾರೇ ಆದರೂ, ದಿನಕ್ಕೆ ಎಂಟು ಗಂಟೆಗಳಂತೆ ನಲವತ್ತು ವರ್ಷ ಸತತ ಅಭ್ಯಾಸ ಮಾಡಿದರೆ, ಈ ರೀತಿ ನುಡಿಸಬಹುದು!" ಈ ಮಾತು ಕೇಳಿ ಆ ಮಹಿಳೆಯ ಮುಖ ಕಪ್ಪಿಟ್ಟಿತು.

(ಸಂಗ್ರಹ: ಎನ್. ಗೋಪಿನಾಥ, ಆಧಾರ : ಆಂಗ್ಲ ಮಾಸ ಪತ್ರಿಕೆ, ವೇದಾಂತಕೇಸರಿ, ಸಂಪುಟ ೮೯, ೨೦೦೩)

ಈ ಲೇಖನದ ಪ್ರಾಯೋಜಕರು : ಲಾಲ್‌ಕೋ ಎಂಟರ್‌ಪ್ರೈಸಸ್, ೮೭, ಸಿ.ಟಿ. ಸ್ಟ್ರೀಟ್, ಬೆಂಗಳೂರು ೫೬೦ ೦೦೩